<u>ಸಾಕ್ಷಿಯನ್ನು ದಿನಾಂಕ**: 03-08-2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**</u>

**<u>ಹೆಚ್ಚುವರಿ ಪಾಟೀ ಸವಾಲು :- 5</u>** <u>ನೇ ಪ್ರತಿವಾದಿ ಪರ ವಕೀಲರಾದ</u> **<u>ಶ್ರೀ.ಮಹಾಂತ್ ರವರಿಂದಃ</u>**

22) ನಾನು ಸುಳ್ಳು ಖಾಸಗಿ ಪಿರ್ಯಾದು ಸಂಖ್ಯೆಃ 23/2005 ನ್ನು 1, 4 ಮತ್ತು 5 ನೇ ಪ್ರತಿವಾದಿಗಳ ವಿರುದ್ದ ದೇವನಹಳ್ಳಿಯ 1 ನೇ ಅಧಿಕ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಈ ದಾವೆಯ ಸಲುವಾಗಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ಸದರಿ ದೂರಿನ ಆಧಾರದ ಮೇರೆಗೆ ದಾಖಲಾಗಿರುವ ಪೌಜುದಾರಿ ಪ್ರಕರಣ ಸಂಖ್ಯೆಃ 127/2008 ರಲ್ಲಿ ಈಗಲೂ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಈ ದಾವೆಯ 1 ನೇ ಆಸ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನಕಲಿ ಮಾಡಲಾಗಿದೆ ಎಂದು ಸದರಿ ಖಾಸಗಿ ಪಿರ್ಯಾದು ಸಲ್ಲಿಸಿದ್ದೇನೆ ಎಂದರೆ ಸರಿ. ಈ ದಾವೆಯ 5 ನೇ ಪ್ರತಿವಾದಿಯನ್ನು ಸದರಿ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಪೋಲಿಸರು ತೋರಿಸಿದ್ದಾರೆ ಎಂದರೆ ಸರಿ.

23) ಈ ದಾವೆಗೋಸ್ಕರ ನಿಪಿ-15 ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು 1 ನೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಿಪಿ-14 ಕ್ರಯಪತ್ರವನ್ನು ಕಾನೂನು ಬದ್ಧವಾಗಿ ಬರೆದುಕೊಟ್ಟಿದ್ದಾನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿಗೆ ತೊಂದರೆ ನೀಡುವ ಸಲುವಾಗಿ ಮತ್ತು ಅವರಿಂದ ಹಣ ಪಡೆಯುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು</u> :-** ಇತರೆ ಪ್ರತಿವಾದಿಗಳು ಮತ್ತು ಅವರ ಪರ ವಕೀಲರು ಗೈರುಹಾಜರು. ಆದ್ದರಿಂದ, ಇತರೆ ಪ್ರತಿವಾದಿಗಳ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇರುವುದಿಲ್ಲ**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**